ಫಾರೆಸ್ಟ್.

ಪ್ರಸಿದ್ಧ ಪತ್ರಿಕೆ.

ತಾರೀಖು 30ನೆ ನವಂಬರ್ 1903.

ನಂ. 352—3785, ಸ್ 1900ನೆ ಇಸವಿ 11ನೆ ನಂಬರ್ ಮೈಸೂರು ಫಾರೆಸ್ಟ್ಸ್ ರೆಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನ್ನನುಸರಿಸಿ ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಷೆಡ್ಯೂಲಿನಲ್ಲಿ ನಮೂದು ಇರುವ ಚಕ್ಕುಬಂದಿಗೆ ಒಳಪಟ್ಟ ಜಂಗಲ್ ಪ್ರದೇಶವನ್ನು ಸ್ 1904ನೆ ಇಸವಿ ಜನವರಿ ಸಾಹ 1ನೆ ತಾರೀಖು ಲಾಗಾಯತು ಸ್ಟೇಟ್ ಫಾರೆಸ್ಟ್ ಎಂದು ತೀರ್ಮಾನಿಸಿ ಅಧಿಕಾರ.

ಷೆಡ್ಯೂಲ್.

ತಿಪ್ಪಸಂದ್ರ.	ತಾಲ್ಲೂಕು.	ಫಾರೆಸ್ಟ್ ಬ್ಲಾಕ್ ಹೆಸರು.	ವಿಸ್ತೀರ್ಣ. ಎ. ಗು.	ಚಕ್ಕುಬಂದಿ.
ತುಮಕೂರು.	ಕೊರಟಗೆರೆ ಸಬ್ ತಾಲ್ಲೂಕು.	ಹೆಬ್ಬಾಕನಿ ಸ್ಟೇಟ್ ಫಾರೆಸ್ಟ್: ಕೋಳಿಕಲ್ಲು ಬ್ಲಾಕ್ ನಂ. 2.	1649|17	ಉತ್ತರಕ್ಕೆ.—ಲೈನು ನೆಗಲಾಲಗಾಮದ ಸರ್ವೆ 88ನೆ ನಂಬರು ನೈರುತ್ಯ ಮೂಲೆಯಿಂದ ಪೂರಟು ಅದೇ ನಂಬರು ದಕ್ಷಿಣ ಕಡೆ ಬೂದಗಾವಿ ಗ್ರಾಮದ ಸರ್ವೆ 29ನೆ ನಂಬರು ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ಸರ್ವೆ 29 ಮತ್ತು 31ನೆ ನಂಬರುಗಳ ದಕ್ಷಿಣವಾಗಿ 32ನೆ ನಂಬರು ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ 32ನೆ ನಂಬರು ದಕ್ಷಿಣವಾಗಿ 33ನೆ ನಂಬರು ಪಶ್ಚಿಮವಾಗಿ 14ನೆ ನಂಬರು ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 14, 11 ಮತ್ತು 17ನೆ ನಂಬರುಗಳಿಗೆ ದಕ್ಷಿಣವಾಗಿ ಆಖ್ಯೆರ್ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಬೂದಗಾವಿ ಗ್ರಾಮದ ಸರ್ವೆ 17, 7 ಮತ್ತು 6ನೆ ನಂಬರುಗಳ ಪೂರ್ವ ದಿಕ್ಕಿನಲ್ಲಿ ಹೊರಟು ಆಖ್ಯೆರ್ ನಂಬರಿನ ಈಶಾನ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ಬೂದಗಾವಿ ಗ್ರಾಮದ ಸರ್ವೆ 35, 39 ಮತ್ತು 38ನೆ ನಂಬರುಗಳ ದಕ್ಷಿಣ ಗಡಿಯಾದ "ನಾಲೆ" ಮೂಲಕ ಹೊರಟು ಆಖ್ಯೆರ್ ಸರ್ವೆ ನಂಬರಿನ ಆಗ್ನೇಯಮೂಲೆಗೆ ಕೇರುತ್ತದೆ. ಪೂರ್ವಕ್ಕೆ.—ಅಲ್ಲಿಂದ ಕುಮಟೇನಹಳ್ಳಿ ಗ್ರಾಮದ ಸರ್ವೆ 11 ಮತ್ತು ಬೆಂಡೋಣಿ ಗ್ರಾಮದ 26 ಮತ್ತು 25ನೆ ನಂಬರುಗಳ ಪಶ್ಚಿಮವಾಗಿ ಹಾದು ಕೋಳಿಕಲ್ಲು ಸ್ಟೇಟ್ ಫಾರೆಸ್ಟು ಗಡಿಗೆ ಕೇರುತ್ತದೆ. ಅಲ್ಲಿಂದ ಅದೇ ಗಡೀಮೇಲೆ ಹೊರಟು ಕುರಂಕೋಟೆ ಗ್ರಾಮದ ಸರ್ವೆ 66ನೆ ನಂಬರಿನ ವಾಯವ್ಯ ಮೂಲೆಗೆ ಕೇರುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಕುರಂಕೋಟೆ ಗ್ರಾಮದ ಸರ್ವೆ 53ನೆ ನಂಬರಿ ಉತ್ತರ ಭಾಗವಾಗಿ ಅದೇನಂಬರಿನ ವಾಯವ್ಯ ದಿಕ್ಕಿಗೆ ಕೇರಿ ಅಲ್ಲಿಂದ ಜಾಂಜರಾಮನಹಳ್ಳಿ ಗ್ರಾಮದ ಸರ್ವೆ 1ನೆ ನಂಬರಿನಲ್ಲಿ ಹೊರಟು ಅದೇ ಗ್ರಾಮದ ಸರ್ವೆ 60ನೆ ನಂಬರು ಪೂರ್ವ ಗಡಿಗೆ ಕೇರುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಜಾಂಜರಾಮನಹಳ್ಳಿ ಸರ್ವೆ 60ನೆ ನಂಬರು ಪೂರ್ವ ದಿಕ್ಕಾಗಿ ಮರನಾಯಕನಹಳ್ಳಿ ಸರ್ವೆ 42ನೆ ನಂಬರ್ ಪೂರ್ವ ದಿಕ್ಕಾಗಿ ಕಡೇ ನಂಬರಿನ ಈಶಾನ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ನೆಗಲಾಲ ಗ್ರಾಮದ ಸರ್ವೆ 102ನೆ ನಂಬರಿನಲ್ಲಿ ಈಶಾನ್ಯ ದಿಕ್ಕಿಗೆ ನೇರವಾಗಿ ಮೊದಲು ಹೊರಟ ಸ್ಥಳಕ್ಕೆ ಕೇರುತ್ತದೆ.

ಸೂ.—ಕೆಳಗೆ ನಮೂದಿರುವ ದಾರಿಗಳು 4 ಗಜಗಳಿಗಿಂತ ಜಾಸ್ತಿಯಾಗಿ ಅಗಲವಿಲ್ಲದೆ ಜನಗಳು ತಿರುಗಾಡುವ ಬ್ಯೆ ಬಿಡಲ್ಪಟ್ಟು ಇರುತ್ತವೆ.

1. ಕುರಂಕೋಟೆಯಿಂದ ಈಶ್ವರದೇವರ ಮತ್ತು ಸಿದ್ಧೇಶ್ವರದೇವರ ಗುಡಿಗಳಿಗೆ ಹೋಗುವ ದಾರಿ—ಈ ದಾರಿಯು ಕುರಂಕೋಟೆ ಗ್ರಾಮದ ಸರ್ವೆ 53 ಮತ್ತು 52ನೆ ನಂಬರುಗಳ ಮಧ್ಯೆ ಡಿವಾರ್ಕೇಷನ್ ಲೈನಿನಲ್ಲಿ ಅದೇ ಗ್ರಾಮದ ಸರ್ವೆ 65ನೆ ನಂಬರಿನ ನೈರುತ್ಯ ಮೂಲೆಯಿಂದ 200 ಗಜದ ಫಾಸಲೆಯಲ್ಲಿ ಪುರುವಾಗಿ ಉತ್ತರ ಮತ್ತು ವಾಯವ್ಯದಿಂಗ್ಮುಖವಾಗಿ ಫಾರೆಸ್ಟಿನಲ್ಲಿ ಬಿಟ್ಟದಮೇಲೆ ಇರುವ ಗುಡಿ ವರಿಗೆ 1958 ಗಜಗಳ ಫಾಸಲೆ ವರಿಗೆ ಹೋಗುತ್ತದೆ.

2. ಕುರಂಕೋಟೆಯಿಂದ ಈಶ್ವರದೇವರ ಗುಡಿಗೆ ಹೋಗುವ ದಾರಿ—ಈ ದಾರಿಯು ಕುರಂಕೋಟೆ ಗ್ರಾಮದ ಸರ್ವೆ 53 ಮತ್ತು 52ನೆ ನಂಬರುಗಳ ಮಧ್ಯೆ ಡಿಮಾರ್ಕೇಷನ್ ಲೈನಿನಲ್ಲಿ ಅದೇ ಗ್ರಾಮದ 53ನೆ ನಂಬರ್ ವಾಯವ್ಯ ಮೂಲೆಯಿಂದ 2 ಫರ್ಲಾಂಗು ದೂರದಲ್ಲಿ ಫಾರೆಸ್ಟ್ ಪ್ರವೇಶಮಾಡಿ 5 ಫರ್ಲಾಂಗು ದೂರ ಪಾಯವ್ಯದಿಂಗ್ಮುಖವಾಗಿ ಸ್ಟೇಟ್ ಫಾರೆಸ್ಟಿನಲ್ಲಿ ಬಿಟ್ಟದಮೇಲೆ ಇರುವ ಗುಡಿ ವರಿಗೆ ಹೋಗುತ್ತದೆ.

3. ಜಂಜರಾಮನ ಹಳ್ಳಿಯಿಂದ ಈಶ್ವರದೇವರ ಗುಡಿಗೆ ಹೋಗುವ ದಾರಿ—ಈ ದಾರಿಯು ಜಂಜರಾಮನಹಳ್ಳಿ ಗ್ರಾಮದ ಸರ್ವೆ 1ನೆ ನಂಬರಿನಲ್ಲಿ ಹೋಗುವ ಡಿಮಾರ್ಕೇಷನ್ ಲೈನಿನಲ್ಲಿ ಕುರಂಕೋಟೆ ಗ್ರಾಮದ ಸರ್ವೆ 53ನೆ ನಂಬರಿನ ವಾಯವ್ಯ ಮೂಲೆಗೆ 2 ಫರ್ಲಾಂಗು ದೂರದಲ್ಲಿ ಫಾರೆಸ್ಟ್ ಪ್ರವೇಶ ಮಾಡಿ ಉತ್ತರದಿಂಗ್ಮುಖವಾಗಿ 2354 ಗಜಗಳ ಫಾಸಲೆ ಗುಡಿವರಿಗೆ ಹೋಗುತ್ತದೆ.

4. ನೆಗಲಾಲದಿಂದ ತಿಬ್ಬೇಶ್ವರ ಗುಡಿಗೆ ಹೋಗುವ ದಾರಿ—ಈ ದಾರಿಯು ಖೂದಗಾವಿ ಗ್ರಾಮದ ಸರ್ವೆ 31ನೆ ನಂಬರಿನ ನೈರುತ್ಯ ಮೂಲೆಯಿಂದ 110 ಗಜ ದೂರದಲ್ಲಿ ಜಂಗಲ್ ಪ್ರವೇಶ ಮಾಡಿ ಆಗ್ನೇಯದಿಂಗ್ಮುಖವಾಗಿ 1364 ಗಜಗಳ ಫಾಸಲೆ ಗುಡಿ ವರಿಗೆ ಹೋಗುತ್ತದೆ.

ತಾರೀಖು 30ನೆ ಡಿಸೆಂಬರ್ 1903.

ನಂ. 360—3791, ಸ್ಯ 1900ನೆ ಇಸವಿ 11ನೆ ನಂಬರು ಮೈಸೂರು ಫಾರೆಸ್ಟ್ ರಗ್ಯುಲೇಷನ್ 17ನೆ ಸೆಕ್ಷನ್ನಿನ ವಿಧಿಗಳನ್ನನುಸರಿಸಿ ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಗೆ ಒಳಪಟ್ಟ ಪ್ರದೇಶವನ್ನು 1904ನೆ ಇಸವಿ ಜನವರಿ ಮಾಹೆ 1ನೆ ತಾರೀಖು ಲಾಗಾಯತು ಸ್ಟೇಟ್ ಫಾರೆಸ್ಟಾಗಿ ಏರ್ಪಡಿಸಿರುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ತುಕಡಿ ಹೆಸರು.	ವಿಸ್ತೀರ್ಣ.	ಚಕ್ಕುಬಂದಿ.
ಅದುಕೂರು.	ಗುಬ್ಬಿ ತಾಲ್ಲೂಕು ಮತ್ತು ಹೊರಟಗೆರೆ ಸಬ್ ತಾಲ್ಲೂಕು	ಮದ್ದಗಿರಿ ಸ್ಟೇಟ್ ಫಾರೆಸ್ಟು ಬೀಟಾವಣಿ	2284 ಎಕರೆ. 18 ಗುಂಟೆ.	ಉತ್ತರಕ್ಕೆ.—ಡಿಮಾರ್ಕೇಷನ್ ಲೈನು ಕಮ್ಮನಕೋಟೆ ಗ್ರಾಮದ ಸರ್ವೆ 43ನೆ ನಂಬರು ದಕ್ಷಿಣ ಮೂಲೆಯಲ್ಲಿ ಮದ್ದಗಿರಿ ಫಾರೆಸ್ಟಿನ ಡಿಮಾರ್ಕೇಷನ್ ಲೈಕ್ ನಿಂದ ಶುರುವಾಗಿ ಅದೇ ಗ್ರಾಮದ ಸರ್ವೆ 44 ಮತ್ತು 33ನೆ ನಂಬರುಗಳಲ್ಲಿ ಹೊರಟು ಸರ್ವೆ 31ನೆ ನಂಬರಿನ ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 31 ಮತ್ತು 30ನೆ ನಂಬರುಗಳ ದಕ್ಷಿಣ ಗಡಿಯಲ್ಲಿ ಹೊರಟು ಈಡೇ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 30 ಮತ್ತು 28ನೆ ನಂಬರುಗಳ ಪೂರ್ವ ಗಡಿ ಮೇಲೆ ಹೊರಟು ಚಿನ್ನಕವಜ್ರದ ಗ್ರಾಮದ ಸರ್ವೆ 29ನೆ ನಂಬರಿನ ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ 29ನೆ ನಂಬರು ದಕ್ಷಿಣ ಗಡಿ ಮೇಲೆ ಹೊರಟು ಅದೇ ಗ್ರಾಮದ ಸರ್ವೆ 16ನೆ ನಂಬರ್ ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ನಂಬರಿನ ದಕ್ಷಿಣ ಗಡಿ ಮೇಲೆ ಹೊರಟು ಅದರ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 17 ಮತ್ತು 13 ನಂಬರುಗಳ ದಕ್ಷಿಣಗಡಿ ಮೇಲೆ ಹೊರಟು ಸರ್ವೆ 163ನೆ ನಂಬರ್‌ವರಿಗೂ ಹೋಗುತ್ತದೆ. ಅಲ್ಲಿಂದ ಅದೇ 163ನೆ ನಂಬರ್ ಮಧ್ಯೆ ಆಗ್ನೇಯದಿಂಗ್ಮುಖವಾಗಿ ಹೊರಟು ಅದೇ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಪೂರ್ವಕ್ಕೆ.—ಅಲ್ಲಿಂದ ಚಿನ್ನಕಹಜ್ರದ ಗ್ರಾಮದ ಸರ್ವೆ 58ನೆ ನಂಬರಿನಲ್ಲಿಯೂ ವತ್ತು ದಾಸರಹಳ್ಳಿ ಮತ್ತು ಜೋಡಿ ಇನಾಂ ವಲಸೆವೀರನಹಳ್ಳಿ ಗಡಿಗಳಮೇಲೆಯೂ ಹೊರಟು ಚಿನ್ನರಾಯದುರ್ಗ, ಚ್ಯಾರೇನಹಳ್ಳಿ ಮತ್ತು ವಲಸೆವೀರನಹಳ್ಳಿ ಈ ಮೂರು ಗ್ರಾಮಗಳ ಗಡಿ ಕೇರುವ ಸ್ಥಳಕ್ಕೆ ಕೇರುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಚಿನ್ನರಾಯದುರ್ಗ ಗ್ರಾಮದ ಸರ್ವೆ 11ನೆ ನಂಬರಿನಲ್ಲಿ ಹೊರಟು ಸರ್ವೆ 10ನೆ ನಂಬರ್ ಈಶಾನ್ಯ ದಿಕ್ಕಿಗೆ ಕೇರುತ್ತದೆ. ಅಲ್ಲಿಂದ 1ನೆ ನಂಬರಿನ ಉತ್ತರ ಗಡಿ ಮೇಲೆ ಹೊರಟು ಆ ನಂಬರಿನ ವಾಯವ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ 1ನೆ ನಂಬರಿನ ಉತ್ತರ ಗಡಿಲಿ ಹೊರಟು ಅದೇ ಗ್ರಾಮದ ಸರ್ವೆ 63ನೆ ನಂಬರಿಗೆ ಕೇರುತ್ತದೆ. ಅಲ್ಲಿಂದ ಅದೇ ಗ್ರಾಮದ ಸರ್ವೆ 55, 63 ಮತ್ತು 73ನೆ ನಂಬರುಗಳ ಉತ್ತರ ಗಡಿ ಮೇಲೆ ಹೊರಟು ಈಡೇ ನಂಬರಿನ ವಾಯವ್ಯ ಮೂಲೆಯಲ್ಲಿ ಚಿನ್ನರಾಯದುರ್ಗ ಮತ್ತು ಮದ್ದಗಿರಿ ಸ್ಟೇಟ್ ಫಾರೆಸ್ಟು ಕೇರುವ ಗಡಿವರಿಗೆ ಹೋಗುತ್ತದೆ. ಅಲ್ಲಿಂದ ಮದ್ದಗಿರಿ ಸ್ಟೇಟ್ ಫಾರೆಸ್ಟಿಗೆ ಆಗ್ನೇಯ ದಿಕ್ಕಿನಲ್ಲಿ ಡಿಮಾರ್ಕೇಷನ್ ಲೈನಿಗೆ ಕೇರುತ್ತದೆ ಪಶ್ಚಿಮಕ್ಕೆ.—ಮದ್ದಗಿರಿ ಸ್ಟೇಟ್ ಫಾರೆಸ್ಟು.

ಮೂದಿರುವ ದಾರಿಯನ್ನು ಆಗಲದಲ್ಲಿ 6 ಗಜಕ್ಕೆ ಜಾಸ್ತಿ ಇಲ್ಲದೆ ಜನಗಳಿಗೂ, ದನಗಳಿಗೂ ಮತ್ತು ಗಾಡಿ

ರ್ಗಕ್ಕೆ ಹೋಗುವ ದಾರಿ—ಈ ದಾರಿಯು ಚಿನ್ನಕವಜ್ರಗ್ರಾಮದ ಸರ್ವೆ 16ನೆ ನಂಬರಿನ ಣದಿಂಗ್ಮುಖವಾಗಿ 2178 ಗಜ ಲಾಂಬಿ ಅದೇ ಗ್ರಾಮದ ಸರ್ವೆ 17ನೆ ನಂಬರಿನ ದಕ್ಷಿಣ

ತಾರೀಖು 30ನೆ ನವಂಬರ್ 1903.

ನಂ. 356—3787, ಸ್ರ 1900ನೆ ಇಸವಿ 11ನೆ ನಂಬರ್ ಮೈಸೂರು ಫಾರೆಸ್ಟ್ಸ್ ರೆಗ್ಯುಲೇಷನ್ಸ್ 17ನೆ ಸೆಕ್ಷನಿನ ವಿಧಿಗಳನ್ನನುಸರಿಸಿ ಮೈಸೂರ ಕ್ರೀಮ್ಸ್ ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಷೆಡ್ಯೂಲಿನಲ್ಲಿ ಸಮೂದಿರುವ ಚಕ್ಕುಬಂದಿಗೆ ಬಳಪಟ್ಟ ಜಂಗಲ್ ಪ್ರದೇಶವನ್ನು 1904ನೆ ಇಸವಿ ಜನವರಿ ಮೊಹೆ 1ನೆ ತಾರೀಖು ಲಾಗಾಯತು ಸ್ಟೇಟ್ ಫಾರೆಸ್ಟ್‌ಎಂದು ತೀರ್ಮಾನಿಸಿ ಆಜ್ಞಾಪಿಸಿದೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ಚಾಮರಾಜನಗರ.	ಕೊಳ್ಳೇಗಾಲ ಸಬ್ ತಾಲ್ಲೂಕು.	911 ಎಕರೆ.	ಕಾವೇರಿಗಲ್.	ಉತ್ತರಕ್ಕೆ.—ಕರಿಯಮ್ಮನಹಳ್ಳಿ ಗ್ರಾಮದ ಸರ್ವೆ 2ನೆ ನಂಬರ ನೈರುತ್ಯ ಮೂಲೆಯಿಂದ ಲೈನು ಪ್ರಾರಂಭವಾಗಿ ಅದೇ ನಂಬರಿನ ದಕ್ಷಿಣ ದಿಕ್ಕಿನಲ್ಲಿ ಹೊರಟು ಸಂಗಾಪುರದ ಸರ್ವೆ 9ನೆ ನಂಬರಿನ ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ಸಂಗಾಪುರದ 9ನೆ ನಂಬರು ಮತ್ತು ಬರ್ಕ ಗ್ರಾಮದ 71ನೆ ನಂಬರ ದಕ್ಷಿಣ ದಿಕ್ಕಿನಲ್ಲಿ ಹೊರಟು ಅದೇ ಗ್ರಾಮದ 68ನೆ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 64ನೆ ನಂಬರಿನ ದಕ್ಷಿಣವಾಗಿ ಹೊರಟು ಆ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅಗ್ರಹಾರಗ್ರಾಮದ ಗಡಿ ಮೇಲೆ ಜೊಟ್ಟು ತರಟೆಬೊಪ್ಪದ ಸರ್ವೆ 65ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಪೂರ್ವಕ್ಕೆ.—ಅಲ್ಲಿಂದ ತರಟೆಬೊಪ್ಪದ ಸರ್ವೆ 65ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಗಡಿ ಮೇಲೂ ಮತ್ತು ಸರ್ವೆ 116ನೆ ನಂಬರಿನ ಪಶ್ಚಿಮ ಗಡಿ ಮೇಲೂ ಹೊರಟು ಅಬ್ಬೈರ್ ನಂಬರಿನ ನೈರುತ್ಯ ಮೂಲೆಗೆ ಕೇರುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ತರಟೆಬೊಪ್ಪದ ಸರ್ವೆ 69 ಮತ್ತು 67ನೆ ನಂಬರುಗಳ ಉತ್ತರ ಗಡಿ ಮೇಲೆ ಹೊರಟು ಅಬ್ಬೈರ್ ನಂಬರಿನ ವಾಯವ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ಗ್ರಾಮದ ಸರ್ವೆ 67ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಗಡಿಗಳ ಮೇಲೂ ಮತ್ತು ಸರ್ವೆ 67, 70, 78, 113ನೆ ನಂಬರುಗಳ ಪಶ್ಚಿಮ ಗಡಿ ಮೇಲೂ ಹೊರಟು ಸರ್ವೆ 114ನೆ ನಂಬರಿನ ಈಶಾನ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ನಂಬರಿನ ಉತ್ತರ ಗಡಿ ಮೇಲೂ ಸರ್ವೆ 83ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಗಡಿಗಳ ಮೇಲೂ ಹೊರಟು ಚನ್ನಪಟ್ಟಣ ಗ್ರಾಮದ ಸರ್ವೆ 7ನೆ ನಂಬರಿನ ಈಶಾನ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ನಂಬರಿನ ಉತ್ತರ ಮತ್ತು ವಾಯವ್ಯ ಗಡಿಗಳ ಮೇಲೆ ಹೊರಟು ಅದೇ ಗ್ರಾಮದ ಸರ್ವೆ 5ನೆ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ 5ನೆ ನಂಬರಿನ ಈಶಾನ್ಯ, ಉತ್ತರ ಮತ್ತು ವಾಯವ್ಯ ಗಡಿಗಳ ಮೇಲೆ ಹೊರಟು ಕಂಬದಹಳ್ಳಿ ಗ್ರಾಮದ ಗಡಿ ಬಾಂದಿಗೆ ಸೇರುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಕಂಬದಹಳ್ಳಿ ಗ್ರಾಮದ ಸರ್ವೆ 15, 14, 13, 12, 6 ಮತ್ತು 6ನೆ ನಂಬರುಗಳ ಪೂರ್ವಗಡಿ ಮೇಲೆ ಹೊರಟು ಅದೇ ಸರ್ವೆ 8ನೆ ನಂಬರಿನ ಈಶಾನ್ಯಮೂಲೆಗೆ ಕೇರುತ್ತದೆ. ಉತ್ತರ ಗಡಿ ಮೇಲೆ ಹೊರಟು ಸರ್ವೆ 9ನೆ ನಂಬರಿನ ಕೇರುತ್ತದೆ. ಅಲ್ಲಿಂದ ಅದೇ ನಂಬರಿನ ಪೂರ್ವ ಗಡಿದಲು ಲೈನ್ ಪ್ರಾರಂಭವಾದ ಸ್ಥಳಕ್ಕೆ ಹೋಗಿ ಕೇರುತ್ತ

ಟಿಪ್ಪಣಿ.—ಕೆಳಗೆ ನಮೂದಿರುವ ದಾರಿಗಳನ್ನು ಬಿಟ್ಟು ಇರುತ್ತದೆ.

1. ಕಂಬದಹಳ್ಳಿ ಗ್ರಾಮದ ನಿವಾಸಿಗಳು ತಮ್ಮ ದನಗಳನ್ನು ಅನುಗೋವಾಳ ಜವಿಸಾನಿಗೆ ಹೋಗಲು ನಂಬರಿನ ಗಡಿ ಮೇಲೆ ಬರುವ ದಿವಾರ್ಡ್ ಲೈನಿನಲ್ಲಿ ದಾರಿ ಬಿಟ್ಟು ಇರುತ್ತೆ. ಈ ದಾರಿಯು 13ನೆ ನಂಬರಿನ ಆಗ್ನೇಯ ದಿಕ್ಕಿನಲ್ಲಿ ಪಶ್ಚಿಮವಾಗಿ ಅದೇ ಗ್ರಾಮದ ಸರ್ವೆ 10ನೆ ನಂಬರಿನ ಆಗ್ನೇ ಈ ದಾರಿಯು 792 ಗಜ ಉದ್ದ ಮತ್ತು 22 ಗಜ ಅಗಲ ಇರುತ್ತದೆ.

2. ಕಂಬದಹಳ್ಳಿ ಗ್ರಾಮದ ಸರ್ವೆ 10ನೆ ನಂಬರಿನಲ್ಲಿ ಹಾಲಿ ಇರುವ ದಾರಿ ಆ ಗ್ರಾಮದ ಪನಗಳು ಕುಂಟೆಗೆ ನೀರು ಕುಡಿಯಲು ಹೋಗುವದಕ್ಕಾಗಿ 418ಗಜ ಲಾಂಬಿ 22ಗಜ ರುಂದಿ ಬಿಟ್ಟು ಇರುತ್ತೆ. ಈ ದಾರಿಯು ಮೇಲ್ಕಂಡ 10ನೆ ನಂಬರಿನ ಆಗ್ನೇಯ ಮೂಲೆಯಿಂದ ಹೊರಟು ಉತ್ತರದಿಂಗ್ಮುಖವಾಗಿ ಹೊರಟು ಕುಂಟೆಗೆ ಕೇರುತ್ತದೆ.

3. ಕಂಬದಹಳ್ಳಿಯಿಂದ ಗೊಲ್ಲಹಳ್ಳಿಗೆ ಹೋಗಲು ಕಂಬದಹಳ್ಳಿ ಗ್ರಾಮದ 10ನೆ ನಂಬರಿನಲ್ಲಿ ಹಾಲಿ ಇರುವ ದಾರಿಯನ್ನು ಬಿಟ್ಟು ಇರುತ್ತೆ. ಈ ದಾರಿಯು ಅದೇ ಕಂಬದಹಳ್ಳಿ ಗ್ರಾಮದ ಸರ್ವೆ 10ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಫಾರೆಸ್ಟು ಪ್ರವೇಶಮಾಡಿ ಉತ್ತರದಿಂಗ್ಮುಖವಾಗಿ 836 ಗಜ ಹೊರಟು ಅದೇ ಸರ್ವೆ 10ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಫಾರೆಸ್ಟು ಬಿಟ್ಟು ಹೋಗುತ್ತದೆ.

ತಾರೀಖು 5ನೆ ಜನವರಿ 1904.

ನಂ. 442—5436, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಫಾರೆಸ್ಟ್ ಅಸಿಸ್ಟೆಂಟ್ ಕನ್‌ಸರ್ವೇಟರ್ ಮತ್ತು ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾದ ಮೆ॥ ಎಂ. ಜಿ. ರಾಮರಾಯರಿಗೆ 1904ನೆ ಜನವರಿ 4ನೆ ತಾರೀಖಿನ ಲಾಗಾಯ್ತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 45 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್‌ಸರ್ವೇಟರಾದ ಮೆ॥ ಎಚ್. ರಾಮಯ್ಯನವರು, ಮೆ॥ ರಾಮರಾಯರು ರಜಾದಲ್ಲಿರುವ ಕಾಲದಲ್ಲಿಯೂ ಮತ್ತೊಂದು ಹುಕುಂ ಕೊಡುವ ಪರಿಯಂತ, ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನ ಚಾರ್ಜ್‌ನಲ್ಲಿರತಕ್ಕದ್ದು.

ತಾರೀಖು 5ನೆ ಜನವರಿ 1904.

ನಂ. 445—5439, ಸ್ 1901ನೆ ನವಂಬರಿ 25ನೆ ಮುಕ್ತಂ 366—1955ನೆ, 1902ನೆ ಫೆಬ್ರುವರಿ 28ನೆ ಮುಕ್ತಂ 567—3047ನೆ ಮತ್ತು 1902ನೆ ಏಪ್ರಿಲ್ 2ನೆ ಮುಕ್ತಂ 659—3452ನೆ ನಂಬರ್ ಇಸ್ತಿಹಾರ್‌ನಾಮೆಗಳ 2ನೆ ಪ್ಯಾರಾವನ್ನು ಬದಲಾಯಿಸೋಣದರಲ್ಲಿ ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದವರು, ಮೈಸೂರು ಡಿಸ್ಟ್ರಿಕ್ಟಿನ ಯೋಚೆಸಲ್ಪಟ್ಟ (1) ಶ್ರೀರಂಗಪಟ್ಣ ತಾಲ್ಲೂಕಿನಲ್ಲಿರುವ ಕರೀಘಟ್ಟ ಸಂದಲ್ ಪ್ಲಾಂಟೇಷನ್, (2) ನಾಗಮಂಗಲ ತಾಲ್ಲೂಕಿನಲ್ಲಿರುವ ಬಸವನಕಲ್ ರಿಜರ್ವ್ ಮತ್ತು (3) ಶ್ರೀರಂಗಪಟ್ಣ ವ ನಾಗಮಂಗಲ ತಾಲ್ಲೂಕುಗಳಲ್ಲಿರುವ ಮುದಿಪಟ್ಟಿ ರಿಜರ್ವ್ ಇವುಗಳ ಕುರ್ತು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿ ಫೈಂಜ್‌ರಾಕ್ಸು ಸಬ್ ಡಿವೀಜನಿನ ಅಕ್ಟಿಂಗ್ ಎಕ್ಸಿಸ್ಟ್ಯಂಟ್ ಅಸಿಸ್ಟೆಂಟ್ ಕಮಿಷನರಾದ ಮೆ॥ಕೆ. ಶ್ರೀಕಂಠಯ್ಯನವರನ್ನು ನೊಕರಮ್ಮಾಡಿರುತ್ತಾರೆ.

1923

ತಾರೀಖು 5ನೆ ಜನವರಿ 1904.

ನಂ. 448—5466, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಫಾರೆಸ್ಟು ಡೆಪ್ಯುಟಿ ಕನ್‌ಸರ್ವೇಟರಾದ ಮೆ॥ ಎಸ್. ಎ. ಬಾಪೂರಾಯರಿಗೆ 1903ನೆ ಡಿಸೆಂಬರ್ 15ನೆ ತಾರೀಖಿನಾರಭ್ಯ 1 ತಿಂಗಳು 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ರೇಂಜಿನ ಫಾರೆಸ್ಟ್ ಅಸಿಸ್ಟೆಂಟ್ ಕನ್‌ಸರ್ವೇಟರಾದ ಮೆ॥ ಎಚ್. ಶ್ರೀನಿವಾಸರಾಯರು ಡಿಸ್ಟ್ರಿಕ್ಟಿನ ಫಾರೆಸ್ಟು ಚಾರ್ಜ್‌ಗೋಸ್ಕರ ಕೋಲಾರಿಗೆ ಹಂಗಾಮಿಯಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾರೀಖು 5ನೆ ಜನವರಿ 1904.

ನಂ. 452—5470, ಫಾರೆಸ್ಟ್ ಕನ್‌ಸರ್‌ವೇಟರವರ ಹೆಡ್‌ಕ್ವಾರ್ಟರ್ ಅಸಿಸ್ಟೆಂಟ್ ವ ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಅಸಿಸ್ಟೆಂಟ್ ಸೆಕ್ರಿಟರಿಯವರಾದ ಮೆ॥ ಜಿ. ಇ. ಬಿಕೆಟ್ಸ್‌ಯವರು, 1903ನೆ ಡಿಸೆಂಬರ್ 2ನೆ ತಾರೀಖಿನಾರಭ್ಯ 3ನೆ ಗ್ರೇಡ್ ಫಾರೆಸ್ಟ್ ಡೆಪ್ಯುಟಿ ಕನ್‌ಸರ್ವೇಟರಾಗಿ ನೊಕರಮ್ಮಾಡಲ್ಪಟ್ಟು ಗೇಂ ಪ್ರಸರ್ವ್‌ಗಳ ಚಾರ್ಜ್‌ನಲ್ಲಿ ಇಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಅಫೀಷಿಯೇಟಿಂಗ್ ಸೆಕ್ರಿಟರಿ.

ಜಿಯೋಲಾಜಿಕಲ್.

ತಾರೀಖು 4ನೆ ಜನವರಿ 1904.

ನಂ. 366—S., ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕೋಲಾರ್ ಗೋಲ್ಡ್‌ಫೀಲ್ಡಿನ ಫೀಲ್ಡ್‌ಗಳ ಡೆಪ್ಯುಟಿ ಇನ್‌ಸ್ಪೆಕ್ಟರಾದ ಮೆ॥ ಜಿ. ಜೆ. ಲೆವಲ್‌ಯವರಿಗೆ 1904ನೆ ಜನವರಿ 4ನೆ ತಾರೀಖಿನಾರಭ್ಯ ಎರಡು ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಇ. ವೆದರಲ್,
ಫಾರ್ ಜಿಯೋಲಾಜಿಕಲ್ ಇಲಾಖೆಯ ಗವರ್ನ್‌ಮೆಂಟ್ ಸೆಕ್ರಿಟರಿ.

ಮಿಲಿಟರಿ

1923

ಇಸ್ತಿಹಾರ್‌ನಾಮೆ.

ತಾರೀಖು 26ನೆ ಡಿಸೆಂಬರ್ 1903.

ನಂ. 1987—9, ಸ್ 1903ನೆ ನವಂಬರ್ ಗುರ್ರ ಲಾಗಾಯ್ತು ಮೈಸೂರು ಪೈದಲ್ ಫೋಜಿನ ಮೊದಲನೇ ಪಟಾಲಮಿನಲ್ಲಿ ಎರಡನೇ ಗ್ರೇಡಿನ ಜವಾನ್‌ದಾರಾಗಿ ಬಮ್ಮರೀಜ್ ಅಲಿ ಮೀಕ್ರಯವರ ನೊಕರತಿಯನ್ನು ಮೈಸೂರು ಸೀಮೆಯ ಶ್ರೀಮಂ ಮಹಾರಾಜರವರು ಮುಂಜಾಗ್ರತ್ತಾಡಿರುತ್ತಾರೆ.

ಹುಕುಂ ಬಮೋಜೀಬ್,
ಆರ್. ಜಿ. ಜೋನ್,
ಲೆಫ್ಟಿನೆಂಟ್ ಕರ್ನಲ್, ವಿ ಟಿಟಿ ಅಸಿಸ್ಟೆಂಟ್.